## 9. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೈಮರ ತೀರ್ಥಹಳ್ಳಿ ತಾ॥ ಶಿವಮೊಗ್ಗ ಜಿಲ್ಲೆ.



### ಶಾಲೆಯ ಪರಿಚಯ

ಶಿವಮೊಗ್ಗ ಜಿಲ್ಲೆಯ ಕುವೆಂಪುರವರ ಜನ್ಮಸ್ಥಳದ ಹಿರಿಮೆಯನ್ನು ಹೊಂದಿರುವ ತೀರ್ಥಹಳ್ಳಿ ತಾಲ್ಲೂಕಿನ ಕಸಬಾ ಹೋಬಳಿಯ ಹೊಸಹಳ್ಳಿ ಗ್ರಾಮದಲ್ಲಿರುವ ಪುಟ್ಟ ಊರಿನಲ್ಲಿರುವ ನಮ್ಮ ಹೆಮ್ಮೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ – ಕೈಮರದ ಯಶೋಗಾಥೆ.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ – ಕೈಮರ ಇಲ್ಲಿ ನಿಮ್ಮ ಮಗುವಿನ **"ಕನಸು ನಮ್ಮ ಶಾಲೆಯಲ್ಲಿ ನನಸು"** ಎಂಬ ಆಶಯದಂತೆ ಶಾಲೆಯು ಶೈಕ್ಷಣಿಕವಾಗಿ ಹಾಗೂ ಭೌತಿಕವಾಗಿ ಅಭಿವೃದ್ಧಿಪಡಿಸಲು ಇಲಾಖೆ, ಇಲಾಖೇತರ ಸಂಘ ಸಂಸ್ಥೆಗಳು, ಎಸ್. ಡಿ. ಎಂ. ಸಿ. ಸಮಿತಿಯವರು, ದಾನಿಗಳು ಶಾಲಾ ಸಿಬ್ಬಂದಿಯವರು ಶಾಲಾ ಮಕ್ಕಳು ಪೋಷಕರು, ಊರಿನ ಹಿರಿಯರು ಜನಪ್ರತಿನಿಧಿಗಳು, ಇವರೆಲ್ಲರ ಸಹಕಾರದಿಂದ ನಮ್ಮ ಶಾಲೆಯ ಮೂಲಭೂತ ಸೌಕರ್ಯ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಪಥದತ್ತ ಸಾಗುತ್ತಿದೆ.

### ಆಕರ್ಷಕವಾದ ಶಾಲಾ ವಾತಾವರಣ:–

ನಮ್ಮ ಶಾಲೆಯಲ್ಲಿ ಉತ್ತಮವಾದ ಕೈತೋಟವಿದೆ. ಕೈತೋಟವು ಹಣ್ಣು ಕೊಡುವ ಹೂ ಕೊಡುವ ಮತ್ತು ಔಷಧಿ ಸಸ್ಯಗಳಿಂದ ಕಂಗೊಳಿಸುತ್ತಿದೆ. ಈ ಶಾಲಾ ತೋಟದ ನಿರ್ವಹಣೆಯನ್ನು ಶಿಕ್ಷಕರ ಮೇಲುಸ್ತುವಾರಿಯಲ್ಲಿ ಮಕ್ಕಳು ನಿರ್ವಹಿಸುತ್ತಿದ್ದಾರೆ. ಉತ್ತಮ ನಿರ್ವಹಣೆಯಿಂದ ನಮ್ಮ ಶಾಲಾ ಕೈತೋಟವು ಸುಂದರವಾಗಿ ಕಾಣುವುದರ ಜೊತೆಗೆ ಆಕರ್ಷಕವಾಗಿದೆ ಎಂದು ತಿಳಿಸಲು ಸಂತೋಷವಾಗುತ್ತಿದೆ.

### ರಂಗಮಂದಿರದ ಮುಂಭಾಗದಲ್ಲಿ ಮೇಲ್ಛಾವಣಿ:–

ನಮ್ಮ ಶಾಲೆಯಲ್ಲಿ ಹನ್ನೊಂದು ಶಾಲಾ ಕೊಠಡಿಗಳಿದ್ದು ಪ್ರತ್ಯೇಕ ಹಾಗೂ ಸುಸಜ್ಜಿತವಾದ ಗ್ರಂಥಾಲಯ, ಪ್ರಯೋಗಾಲಯ, ಕಂಪ್ಯೂಟರ್ ಕೊಠಡಿ ಹಾಗೂ ಎಲ್ಲಾ ತರಗತಿಗಳಿಗೆ ಪ್ರತ್ಯೇಕ ತರಗತಿ ಕೋಣೆಗಳು ಹಾಗೂ ಮಕ್ಕಳಿಗೆ ಕುಳಿತುಕೊಂಡು ಪಾಠ ಕೇಳಲು ಸಾಕಷ್ಟು ಪೀಠೋಪಕರಣಗಳು ಹಾಗೂ ಕಲಿಕೋಪರಣಗಳು ಲಭ್ಯವಿದ್ದು ಶೈಕ್ಷಣಿಕ ಬೋಧನೆಗೆ ಉಪಯೋಗಿಸಿಕೊಳ್ಳಲಾಗಿದೆ.

ನಮ್ಮ ಶಾಲೆಯಲ್ಲಿ ಸುಸಜ್ಜಿತವಾದ ಅಕ್ಷರ ದಾಸೋಹದ ಕೊಠಡಿ ಹಾಗೂ ಉಗ್ರಾಣ ಕೊಠಡಿ, ರಂಗಮಂದಿರ, ಪ್ರತ್ಯೇಕವಾದ ಗಂಡು ಮಕ್ಕಳಿಗೆ ಹಾಗೂ ಹೆಣ್ಣು ಮಕ್ಕಳಿಗೆ ಶೌಚಾಲಯ ಮತ್ತು ರಂಗ ಮಂದಿರದ ಮುಂಭಾಗದಲ್ಲಿ ಮೇಲ್ಛಾವಣಿ ವ್ಯವಸ್ಥೆ, ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯವನ್ನು ಹೊಂದಿದೆ.

ಈ ಸಾಲಿನಲ್ಲಿ ಜಿಲ್ಲಾ ಪಂಚಾಯ್ತಿ ಹಾಗೂ ಶಾಸಕರ ಅನುದಾನದಿಂದ ಕೊಡುಗೆಯಾಗಿ 3ಲಕ್ಷ ರೂಗಳಲ್ಲಿ ಸುಸಜ್ಜಿತವಾದ ಮೇಲ್ಛಾವಣಿಯನ್ನು ನಿರ್ಮಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಪ್ರಾಥನೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ವೀಕ್ಷಣೆ ಮಧ್ಯಾಹ್ನ ಬಿಸಿಊಟದ ಯೋಜನೆಗೆ ಅನುಕೂಲಕರವಾಗಿದೆ.

### ಗ್ರಂಥಾಲಯ:–

ಜ್ಞಾನ ಸೃಜನೆಯ ಗ್ರಂಥಾಲಯ, ಶಾಲಾ ಶೈಕ್ಷಣಿಕ ನಾಯಕತ್ವ ಎಸ್. ಎಲ್. ಡಿ. ಪಿ ಯೋಜನೆಯಡಿ ಜ್ಞಾನ ಸೃಜನೆಯ ಗ್ರಂಥಾಲಯವನ್ನು ನಮ್ಮ ಶಾಲೆಯಲ್ಲಿ ನಿರ್ಮಿಸಿ ದಾನಿಗಳಿಂದ ಅನೇಕ ಪುಸ್ತಕವನ್ನು ಪಡೆದು, ಪುಸ್ತಕ ಜೋಳಿಗೆ ಕಾರ್ಯಕ್ರಮದಡಿ ಅನೇಕ ಪುಸ್ತಕಗಳನ್ನು ಸಂಗ್ರಹಿಸಿದೆ. ದಾನಿಗಳಿಂದ ಕೊಡುಗೆಯಾಗಿ ಮೂರು ಗಾಜಿನ

ಬೀರುಗಳು ರ್‍ಯಾಕ್‌ಗಳನ್ನು ಪಡೆದು ಪುಸ್ತಕಗಳನ್ನು ಜೋಡಿಸಿ ಮಕ್ಕಳಿಗೆ ಸುಲಭವಾಗಿ ತಮಗೆ ಇಷ್ಟವಾದ ಪುಸ್ತಕ ಪಡೆದು ಓದಲು ಅನುವು ಮಾಡಿಕೊಡಲಾಗಿದೆ.

### ಶಾಲಾ ಕೈತೋಟ:–

ಪರಿಸರದ ಬಗ್ಗೆ ವಿಶೇಷವಾದ ಕಾಳಜಿ ಮೂಡಿಸುವ ಸಲುವಾಗಿ ಪೋಷಕರು, ಮಕ್ಕಳು, ಶಿಕ್ಷಕರು ಮತ್ತು ಎಸ್. ಡಿ. ಎಂ. ಸಿ.ಯವರು ಸೇರಿ ಅನೇಕ ಜಾತಿಯ ಗಿಡಗಳನ್ನು ಬೆಳೆಸಿ ಅದರ ಸೌಂದರ್ಯವನ್ನು ಹೆಚ್ಚಿಸಲು ಪಾತಿಗಳಾಗಿ ನಿರ್ಮಿಸಿ ಔಷಧಿ ಸಸ್ಯಗಳು, ಹೂವಿನ ಗಿಡಗಳು ಹಣ್ಣಿನ ಗಿಡ ಹಾಗೂ ಅಲಂಕಾರಿಕ ಗಿಡಗಳನ್ನು ನೆಡೆಸುವುದರ ಮೂಲಕ **"ಪರಿಸರ ಸಂರಕ್ಷಣೆ ನಮ್ಮೆಲರ ಹೊಣೆ"** ಎಂಬ ಧ್ಯೇಯ ವಾಕ್ಯದಂತೆ ಪಾಲಿಸುತ್ತಿದ್ದೇವೆ.

### ಪ್ರಯೋಗಾಲಯ /ರಾಷ್ಟ್ರೀಯ ಆವಿಷ್ಕಾರ್ ಅಭಿಯಾನ್:–

ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಮೂಡಿಸುವ ಸಲುವಾಗಿ ಇಲಾಖಾ ನೆರವಿನಿಂದ ಅನೇಕ ಪ್ರಯೋಗಾಲಯದ ಉಪಕರಣಗಳನ್ನು ಖರೀದಿಸುವರೊಂದಿಗೆ, **"ಮಾಡಿ ಕಲಿ ನೋಡಿ ತಿಳಿ"** ಎಂಬ ಮಾತಿನಂತೆ ಮಕ್ಕಳೇ ಅನೇಕ ವಿಜ್ಞಾನ ಮತ್ತು ಗಣಿತಕ್ಕೆ ಸಂಬಂಧಿಸಿದ ಉಪಕರಣಗಳನ್ನು ತಯಾರಿಸಿ ಕಲಿಕೆಯನ್ನು ದೃಢೀಕರಿಸಲು ರಾಷ್ಟ್ರೀಯ ಆವಿಷ್ಕಾರ ಯೋಜನೆಯು ಮಕ್ಕಳಲ್ಲಿ ಹುಮ್ಮಸ್ಸನ್ನು ಮೂಡಿಸಿದೆ. ಡಾ॥ ಹೆಚ್. ಎನ್. ಶಿವನಂಜಯ್ಯ ಲಯನ್ ಕ್ಲಬ್ ಮೋದಿ ನಗರ–ಬೆಂಗಳೂರು ಇವರ ನೆರವಿನೊಂದಿಗೆ ಪ್ರಯೋಗಾಲಯದ ವಸ್ತುಗಳನ್ನು ಇಡಲು ಬೀರುಗಳನ್ನು ಸಹ ಪಡೆಯಲಾಯಿತು.

### ಕುಡಿಯುವ ನೀರು:–

ಶುದ್ಧವಾದ ಕುಡಿಯುವ ನೀರಿಗಾಗಿ ಮಕ್ಕಳಿಗೆ ಜಿಲ್ಲಾ ಪಂಚಾಯ್ತಿಯ ಅನುದಾನದಿಂದ ಒಂದು ಕುಡಿಯುವ ನೀರಿನ ಬಾವಿಯನ್ನು ನಿರ್ಮಿಸಲಾಗಿದೆ. ಹಾಗೆಯೇ ನೀರಿನ ಶುದ್ಧೀಕರಣ ಯಂತ್ರವನ್ನು ಡಾ॥ ಹೆಚ್. ಎನ್. ಶಿವನಂಜಯ್ಯನವರು ಲಯನ್ಸ್ ಕ್ಲಬ್ ಮೋದಿನಗರ – ಬೆಂಗಳೂರು ಇವರಿಂದ ಒಂದು ಲಕ್ಷ ರೂ ಮೌಲ್ಯದ ಆರ್. ಒ ಫಿಲ್ಟರ್ ಪಡೆಯಲಾಗಿದೆ. ಇದರಿಂದ ಪ್ರತಿ ನಿತ್ಯ ಮಕ್ಕಳು ಶುದ್ಧವಾದ ಕುಡಿಯುವ ನೀರನ್ನು ಪಡೆಯುತ್ತಿದ್ದಾರೆ. ವೆಂಕಟೇಶ್ವರ ಸ್ವ–ಸಹಾಯ ಸಂಘ ತೀರ್ಥಹಳ್ಳಿ, ಇವರು ನೀರನ್ನು ಶುದ್ಧವಾಗಿ ತುಂಬಿಸಲು ಎಂಟು ಸ್ಟೀಲ್ ಡ್ರಮ್‌ಗಳನ್ನು ಹಾಗೂ ಸೇವಂತಿ ಮೆಮೋರಿಯಲ್ ಟ್ರಸ್ಟ್ ಇವರು ಕುಡಿಯುವ ಲೋಟ ಹಾಗೂ ಊಟದ ತಟ್ಟೆಯನ್ನು ಎಲ್ಲಾ ಮಕ್ಕಳಿಗೆ ಒದಗಿಸಿದ್ದಾರೆ. ಎಸ್. ಬಿ. ಐ. ಕೈಮರದ ಶಾಖೆಯಿಂದ ಕುಡಿಯುವ ನೀರಿಗಾಗಿ ಹಾಗೂ ಅಡುಗೆಗಾಗಿ ಬಳಸಲು ಒಂದು ಅಕ್ವಾಗಾರ್ಡನ್ನು ದಾನವಾಗಿ ಪಡೆಯಲಾಗಿದೆ.

### ನಲಿ–ಕಲಿ ತರಗತಿ :–

ವಿಶಾಲವಾಗಿ ನಿರ್ಮಿಸಿದ ಕೊಠಡಿಯಲ್ಲಿ ನಲಿ–ಕಲಿ ತರಗತಿಗಳನ್ನು ಆಯೋಜಿಸಲಾಗಿರುತ್ತದೆ. ಈ ತರಗತಿಗಳಿಗೆ ಕಲಿಕೆಗೆ ಅಗತ್ಯವಾಗಿ ಬೇಕಾಗಿರುವ ಎಲ್ಲಾ ವಿಷಯಗಳಿಗೆ ವಿಭಿನ್ನ ರೀತಿಯ ಬೋಧನ ಚಟುವಟಿಕೆಗಳನ್ನು ನಿರ್ಮಿಸಿಕೊಂಡು ಕೊಠಡಿಯನ್ನು ಅಲಂಕೃತವಾಗಿ ಮಾಡಿಕೊಂಡು ಗುಣಾತ್ಮಕವಾಗಿ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ.

### ಶೈಕ್ಷಣಿಕ ಸೌಲಭ್ಯ:–

ಉಚಿತ ಶಾಲಾ ಬ್ಯಾಗ್ ಮತ್ತು ನೋಟ್ ಬುಕ್ ಹಾಗೂ ಕಲಿಕೋಪಕರಣಗಳನ್ನು ಪ್ರತಿ ವರ್ಷ ಡಾ॥ ಹೆಚ್. ಎನ್ ಶಿವನಂಜಯ್ಯ ಲಯನ್ಸ್ ಕ್ಲಬ್ ಮೋದಿ ನಗರ– ಬೆಂಗಳೂರು ಇವರು ನೀಡುತ್ತಾ ಬಂದಿದ್ದಾರೆ. ಹಾಗೆಯೇ ಯೂತ್ ಫಾರ್ ಸೇವಾ ಸಮಿತಿ ಇವರ ವತಿಯಿಂದ ಪ್ರತಿ ವರ್ಷವು ಉಚಿತ ಶಾಲಾ ಬ್ಯಾಗ್, ನೋಟ್ ಪುಸ್ತಕ ಹಾಗೂ ಕಲಿಕೋಪಕರಣಗಳನ್ನು ಪಡೆಯುತ್ತಿದ್ದು ಇದರ ಜೊತೆಗೆ ಪ್ರತಿ ಶನಿವಾರದಂದು ಒಬ್ಬ ಸಂಗೀತ ಶಿಕ್ಷಕಿಯನ್ನು ಮಕ್ಕಳಿಗೆ ಸಂಗೀತ ಕಲಿಸಲು ಕಳಿಸುತ್ತಿದ್ದಾರೆ.

### ಕಂಪ್ಯೂಟರ್ ಶಿಕ್ಷಣ:–

ಎಲ್ಲಾ ಮಕ್ಕಳಿಗೆ ಉಚಿತ ಕಂಪ್ಯೂಟರ್ ಶಿಕ್ಷಣ ನೀಡಲು ದಾನಿಗಳು ಪೋಷಕರ ನೆರವಿನಿಂದ ಕಂಪ್ಯೂಟರ್ ಶಿಕ್ಷಕಿಯನ್ನು ನೇಮಿಸಿ ಮಕ್ಕಳಿಗೆ ಕಂಪ್ಯೂಟರ್‌ನ್ನು ತಾಲ್ಲೂಕು ಪಂಚಾಯ್ತಿಯಿಂದ ಹಾಗೂ ಶಾಸಕರಾದ ಕಿಮ್ಮನೆ ರತ್ನಾಕರ್‌ರವರ ಸಹಕಾರದಿಂದ ಇನ್ಫೊಸಿಸ್ ಫೌಂಡೇಷನ್ ಬೆಂಗಳೂರು ಈ ಸಂಸ್ಥೆಯಿಂದ 4 ಕಂಪ್ಯೂಟರ್‌ನ್ನು ಉಚಿತವಾಗಿ ಪಡೆದು ಸದ್ಬಳಕೆ ಮಾದಲಾಗುತ್ತಿದೆ.

### ಯು.ಕೆ.ಜಿ. ಶಿಕ್ಷಣ:–

ಶಾಲೆಯಲ್ಲಿ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಲು ಎಸ್. ಡಿ. ಎಂ. ಸಿ. ಪೋಷಕರು ಹಾಗೂ ದಾನಿಗಳ ಸಹಾಯದಿಂದ ಯು.ಕೆ.ಜಿ ತರಗತಿಯನ್ನು ಪ್ರಾರಂಭಿಸಿ ಅದಕ್ಕೆ ಒಬ್ಬ ಶಿಕ್ಷಕಿ ಹಾಗೂ ಆಯಾವನ್ನು ನೇಮಿಸಲಾಗಿದೆ. ಇದರಿಂದ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ.

### ಕ್ರೀಡಾಕೂಟ ಮತ್ತು ಪ್ರತಿಭಾ ಕಾರಂಜಿ:–

ಪ್ರತಿ ವರ್ಷವು ಕ್ರೀಡಾಕೂಟ ಮತ್ತು ಪ್ರತಿಭಾ ಕಾರಂಜಿಯಲ್ಲಿ ಉತ್ತಮ ಪ್ರದರ್ಶನ ತೋರುತ್ತಾ ಶಾಲೆಗೆ  ಸಮಗ್ರ ಪ್ರಶಸ್ತಿ ತರುವುದರೊಂದಿಗೆ ಜಿಲ್ಲಾಮಟ್ಟದವರೆಗೂ ಹೋಗಿರುತ್ತಾರೆ.

### ಪ್ರೊಜೆಕ್ಟರ್, ಶಾಲಾ ಕೊಠಡಿ:–

ವಿಶಾಲವಾದ ಸುಸಜ್ಜಿತವಾದ ಒಂದು ಶಾಲಾ ಕೊಠಡಿಯನ್ನು ಮಾಜಿ ಶಿಕ್ಷಣ ಸಚಿವರ ಅನುದಾನದಲ್ಲಿ ನಿರ್ಮಿಸಲಾಗಿದೆ.

ರಾಷ್ಟ್ರೀಯ ಹಬ್ಬಗಳಂದು ಮಕ್ಕಳಿಗೆ ಗಾಂಧಿ ಟೋಪಿಯನ್ನು ದಾನಿಗಳ ನೆರವಿನಿಂದ ಪಡೆಯಲಾಯಿತು. ಹಾಗೂ ಎಲ್ಲಾ ಮಕ್ಕಳಿಗೆ ಊಟದ ಡಬ್ಬಿಯನ್ನು ಕೊಡಿಸಲಾಯಿತು. ಹಾಗೂ ಎಲ್ಲಾ ಮಕ್ಕಳ ದಾಖಲೆಗಳನ್ನು ಸಂಗ್ರಹಿಸಿಡಲು ಫೈಲುಗಳನ್ನು ದಾನಿಗಳಿಂದ ಪಡೆಯಲಾಯಿತು. ಹಾಗೆಯೇ ಸಂತಸದಾಯಕ ಕಲಿಕೆಗೆ ಪ್ರೊಜೆಕ್ಟರ್‌ನ್ನು ದಾನವಾಗಿ ಪಡೆಯಲಾಯಿತು.

### ಮಕ್ಕಳ ಸಂತೆ:–

ಮಕ್ಕಳಲ್ಲಿ ವ್ಯವಹಾರಿಕ ಜ್ಞಾನ ಹೆಚ್ಚಿಸಲು **"ಮಕ್ಕಳ ಸಂತೆ "** ಯಶಸ್ವಿಯಾಗಿ ನಡೆಸಲಾಯಿತು.

### ಶಾಲೆಗೆ ಸಂದ ಗೌರವಗಳು:–

ಕ್ಲಸ್ಟರ್ ಮಟ್ಟದ ಉತ್ತಮ ಶಾಲೆ, ಕಸಬಾ ಹೋಬಳಿಯ ಉತ್ತಮ ಎಸ್. ಡಿ.. ಎಂ.ಸಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಹೀಗೆ ಎಲ್ಲಾ ದಾನಿಗಳಿಂದ, ಪೋಷಕರಿಂದ, ಎಸ್. ಡಿ. ಎಂ. ಸಿಯವರಿಂದ, ತಾಲ್ಲೂಕು, ಜಿಲ್ಲಾ ಪಂಚಾಯ್ತಿ, ಗ್ರಾಮ ಪಂಚಾಯ್ತಿ, ಹಿರಿಯ ವಿದ್ಯಾರ್ಥಿಗಳು, ಊರಿನ ಪ್ರಮುಖ ವ್ಯಕ್ತಿಗಳಿಂದ ದಾನವಾಗಿ ಅನೇಕ ವಸ್ತುಗಳನ್ನು ಪಡೆದು, ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಹೆಚ್ಚಿಸುವದರೊಂದಿಗೆ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡಲಾಗಿದೆ. ಇದಕ್ಕೆ ಪೂರಕವಾಗಿ ಈ ಶಾಲೆಯ ಮುಖ್ಯ ಶಿಕ್ಷಕರಾದ ವಸಂತಿ ಎನ್ ರವರಿಗೆ ಈ ಸಾಲಿನ **"ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕಿ"** ಎಂಬ ಪ್ರಶಸ್ತಿ ಬಂದಿರುವುದು ನಮ್ಮೆಲ್ಲರ ಹೆಮ್ಮೆಯಾಗಿದೆ.












LIONS CLUB
LIONS CLUB
THIRTHAHALLI



















